ಎಂ ವಿ ಸಿ ನಂಃ 28/2024
ಪಿ. ಡಬ್ಲ್ಯೂ-2

**(ಇಂದು ದಿನಾಂಕ 14-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್ ಎಸ್ ಜೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ . ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| ಕ್ರ.ಸಂ. | ದಾಖಲೆಗಳ ನಮೂನೆ | ನಿಶಾನೆ |
|---|---|---|
| 1 | ಪ್ರಥಮ ವರ್ತಮಾನ ವರದಿಯ ದೃಡೀಕೃತ ಪ್ರತಿ | ನಿ.ಪಿ-1 |
| 2 | ದೂರಿನ ದೃಡೀಕೃತ ಪ್ರತಿ | ನಿ.ಪಿ-2 |
| 3 | ಅಪಘಾತ ಸ್ಥಳದ ಪಂಚನಾಮೆ ಹಾಗೂ ನಕಾಶೆಯ ದೃಡೀಕೃತ ಪ್ರತಿ | ನಿ.ಪಿ-3 |
| 4 | ಮೋಟರ ವಾಹನ ನಿರೀಕ್ಷರ ವರದಿಯ ದೃಡೀಕೃತ ಪ್ರತಿ | ನಿ.ಪಿ-4 |
| 5 | ಗಾಯದ ಪ್ರಮಾಣ ಪತ್ರದ ದೃಡೀಕೃತ ಪ್ರತಿ | ನಿ.ಪಿ-5 |
| 6 | ದೋಷಾರೋಪಣ ಪತ್ರದ ದೃಡೀಕೃತ ಪ್ರತಿ | ನಿ.ಪಿ-6 |
| 7 | ಪ್ರವೀಣ ಪ್ರಕಾಶ ಕಲ್ಲವಡ್ಡರ ನೋಟರಿಯವರಿಂದ ದೃಡೀಕರಿಸಿದ ಆಧಾರ ಕಾರ್ಡ | ನಿ.ಪಿ-7 |
| 8 | ಪ್ರಕಾಶ ಹನಮಂತಪ್ಪ ಕಲ್ಲವಡ್ಡರ ನೋಟರಿಯವರಿಂದ ದೃಡೀಕರಿಸಿದ ಆಧಾರ ಕಾರ್ಡ | ನಿ.ಪಿ-8 |
| 9 | ಜಿಲ್ಲಾ ಆಸ್ಪತ್ರೆ ಧಾರವಾಡ ಇವರ ಪತ್ರ ಹಾಗೂ ಲಗತ್ತು ದಾಖಲೆಗಳು (ಒಟ್ಟಾರೆ) | ನಿ.ಪಿ-9 |

**ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದ**

1 ನೇ ಎದುರುದಾರರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು . ಗೈರು ಹಾಜರು ಇದ್ದಾರೆ , ಕೊರಿಕೆ ಇಲ್ಲ , ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು .

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಎಂ ಪಿ ಟಿ ವಕೀಲರಿಂದ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭಾಸ ಮಾಡಿದ್ದೇನೆ . ಅಪಘಾತದಲ್ಲಿ ಎರಡು ಮೋಟರ ಸೈಕಲಗಳು ಭಾಗಿಯಾಗಿವೆ ಎಂದರೆ ಸರಿ . ಎರಡು ಮೋಟರ ಸೈಕಲಗಳು ಮುಖಾಮುಖಿಯಾಗಿ ಡಿಕ್ಕಿಹೊಡೆದ ಪರಿಣಾಮ ಅಪಘಾತವಾಗಿದೆ ಎಂದರೆ ಸರಿ . ನನ್ನ ಮಗ ಸವಾರಿ ಮಾಡುತ್ತಿದ್ದ ಕೆಎ-25/ಎಚ್ ಇ-5179 ಮೋಟರ ಸೈಕಲನ ಮಾಲೀಕರು ಅನೀಲಕುಮಾರ ಅಳ್ಳಾವರ ಎನ್ನುವವರು ಆಗಿರುತ್ತಾರೆ . ಕೆಎ-25/ಎಚ್ ಇ-5179 ಮೋಟರ ಸೈಕಲನ್ನು ನನ್ನ ಮಗ ಅಪಘಾತದ ಸಮಯದಲ್ಲಿ ಚಲಾಯಿಸುತ್ತಿದ್ದ

ಎಂದರೆ ಸರಿಯಲ್ಲ . ಅಪಘಾತದ ಸಮಯದಲ್ಲಿ ನನ್ನ ಮಗನ ವಯಸ್ಸು 17 ಇತ್ತು . ಪೊಲಿಸರು ನನ್ನ ಮಗ ಪ್ರವೀಣ ವಿರುದ್ಧ ಬಾಲ ನ್ಯಾಯ ಮಂಡಳಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಮಾಹಿತಿ ನನಗೆ ಗೊತ್ತಿದ್ದರೂ ಸಹ ಅದನ್ನು ಮುಚ್ಚಿಟ್ಟು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ . ಸತ್ಯ ಸಂಗತಿಯನ್ನು ಮುಚ್ಚಿಟ್ಟು ಕೆಎ-25/ಎಚ್ ಎಫ್-5928 ಮೋಟರ ಸೈಕಲ ಸವಾರನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ . ಅನೀಲಕುಮಾರ ಅಳ್ಳಾವರ ಇವರು ಚಾಲನಾ ಪರವಾನಿಗೆ ಹೊಂದಿಲ್ಲದ ಬಾಲಕನಿಗೆ ಮೋಟಾರು ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಲು ಕೊಟ್ಟಿದ್ದ ಕಾರಣ ಅವನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ . ಈ ಮಾಹಿತಿ ನನಗೆ ಗೊತ್ತಿದ್ದರೂ ಸಹ ದುರುದ್ದೇಶ ಪೂರಿತವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಅಪಘಾತದ ನಂತರ ನನ್ನ ಮಗನಿಗೆ ಸರ್ಕಾರಿ ಆಸ್ಪತ್ರೆಯಲಿ ಚಿಕಿತ್ಸೆ ಕೊಡಿಸಿದ್ದೇನೆ ಎಂದರೆ ಸರಿ . ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯು ಉಚಿತವಾಗಿ ಸಿಗುತ್ತದೆ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ನನ್ನ ಮಗನ ಚಿಕಿತ್ಸೆಗೆ ರೂ. 1 ಲಕ್ಷ ರೂಪಾಯಿ ಹಣ ಖರ್ಚು ಮಾಡಿರುವುದಾಗಿ ಯಾವುದೇ ದಾಖಲೆ ಹಾಜರುಪಡಿಸದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ .

ನನ್ನ ಮಗ ದಿನಪತ್ರಿಕೆಗಳನ್ನು ಹಾಕುತ್ತಿದ್ದನು . ನನ್ನ ಮಗ ಯಾವ ಪತ್ರಿಕಾ ವಿತರಕರ ಬಳಿ ಕೆಲಸ ಮಾಡುತ್ತಿದ್ದ ಎಂದು ನನಗೆ ಹೇಳಲು ಆಗುವುದಿಲ್ಲ . ನನ್ನ ಮಗ ಅಲ್ಪವಹಿಯಾಗಿರುವುದರಿಂದ ನಾನು ಹೇಳಿದಂತೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ . ನನ್ನ ಮಗನ ಮಾಸಿಕ ಆದಾಯವನ್ನು ತೊರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ .

ಅಪಘಾತವು ದಿ፥ 14.11.2023 ರಿಂದ ನಡೆದಿದ್ದು ದೂರನ್ನು ದಿ፥ 15.11.2023 ರಂದು ಕೊಟ್ಟಿದ್ದಿರಿ ಎಂದು ಸೂಚಿಸಿದರೆ ಸಾಕ್ಷಿಯು ನಾವು ಮಗನ ಜೊತೆ ಆಸ್ಪತ್ರೆಯಲ್ಲಿ ಉಳಿದಿದ್ದೆವು ಎಂದು ಹೇಳುತ್ತಾರೆ . ನನ್ನ ಮಗನು ದಾಖಲು ಮಾಡಿದ ಆಸ್ಪತ್ರೆಯವರು ಪೋಲಿಸ್ ನವರಿಗೆ ಅಪಘಾತದ ಕುರಿತಾದ ಮಾಹಿತಿಯನ್ನು ಅಥವಾ ನನ್ನ ಮಗ ದಾಖಲಾಗಿರುವ ಮಾಹಿತಿಯನ್ನು ನೀಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ . ಕೆಎ-25/ಎಚ್ ಎಫ್ -5928 ಮೋಟರ ಸೈಕಲನ ಮಾಲೀಕರು ಚಾಲನಾ ಪರವಾನಿಗೆ

ಹೊಂದಿಲ್ಲದ ವ್ಯಕ್ತಿಗೆ ಸದರಿ ವಾಹನವನ್ನು ಚಲಾಯಿಸಲು ಕೊಟ್ಟಿದ್ದ ಕಾರಣ ವಿಮಾ ಷರತುತ ಉಲ್ಲಂಘಣೆಯಾಗಿದ್ದು ಈ ಕಾರಣದಿಂದ 2 ನೇ ಎದುರುದಾರರು ನಾನು ಕೊರಿರುವಂತೆ ಪರಿಹಾರ ನೀಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ವೈದ್ಯಕೀಯ ದಾಖಲೆಗಳು ನನಗೆ ಅನುಕೂಲಕರವಾಗಲೀ ಎಂದು ಸೃಷ್ಟಿ ಮಾಡಿ ತಂದು ಹಾಜರುಪಡಿಸಿದ್ದೆನೆ ಎಂದರೆ ಸರಿಯಲ್ಲ . ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.